ಏತ ನೀರಾವರಿ ಕಾಮಗಾರಿ

357 (686) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು) ಜಲಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–

(ಅ) ಮದ್ದೂರು ತಾಲ್ಲೂಕು ನೀಲಕಂಠನ ಹಳ್ಳಿ ಹತ್ತಿರ ಬಾಣಣ್ಣಾಜಿಪಂತ್ ಏತ ನೀರಾವರಿಗೆ ಶಿಂಷಾ ನದಿಗೆ ಅಡ್ಡಲಾಗಿ ನಿರ್ಮಾಣ ಹಂತದಲ್ಲಿದ್ದ ಚೆಕ್‌ಡ್ಯಾಂ ಎರಡನೇ ಬಾರಿಗೆ ಕಳಪೆ ಕಾಮಗಾರಿಯಿಂದ ಒಡೆದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ, ಕಳಪೆ ಕಾಮಗಾರಿಗೆ ಕಾರಣರಾದ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆಯೇ? ಹಾಗಿದ್ದಲ್ಲಿ ಯಾವ ರೀತಿಯ ಕ್ರಮ ಕೈಗೊಂಡಿದೆ (ಪೂರ್ಣ ವಿವರ ನೀಡುವುದು)

(ಇ) ಚೆಕ್‌ಡ್ಯಾಂ ಒಡೆದು ಹೋಗಿರುವುದರಿಂದ ಸ್ಥಳೀಯ ರೈತರುಗಳು ತಮ್ಮ ಜಮೀನುಗಳಲ್ಲಿ ಬೆಳೆದಿದ್ದ ಬೆಳೆ ಹಾಗೂ ಭೂಮಿಯು ಪೂರ್ಣವಾಗಿ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಈ) ಹಾಗಿದ್ದಲ್ಲಿ, ಬೆಳೆ ನಾಶವಾಗಿರುವ ರೈತರುಗಳಿಗೆ ಸರ್ಕಾರ ಪರಿಹಾರ ಧನವನ್ನು ನೀಡಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಪ್ರಮಾಣದ ಪರಿಹಾರ ಧನವನ್ನು ನೀಡಲಾಗುವುದು?

(ಉ) ಕಳಪೆ ಕಾಮಗಾರಿಯಿಂದ ಹಾಳಾಗಿರುವ ಚೆಕ್–ಡ್ಯಾಂ ಅನ್ನು ಕೂಡಲೇ ದುರಸ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):**

(ಅ) ಮದ್ದೂರು ತಾಲ್ಲೂಕಿನ ನೀಲಕಂಠನಹಳ್ಳಿ ಗ್ರಾಮದ ಬಳಿ ಬಾಣೋಜಿಪಂಥ್ ಏತ ನೀರಾವರಿ ಯೋಜನೆಗೆ ನೀರು ಒದಗಿಸುವ ಸಲುವಾಗಿ ಶಿಂಷಾ ನದಿಗೆ ಕಟ್ಟಲಾಗಿದ್ದ ವಿಯರ್‌ನ ಬಲತುದಿಯ ಸರಪಳಿ 195.00 ಮೀ ನಿಂದ 210.00 ಮೀ ರವರೆಗೆ ದಿನಾಂಕ: 08–05–2007 ರಂದು ಧಕ್ಕೆಯಾಗಿತ್ತು. ಧಕ್ಕೆಯಾದ ಈ ಭಾಗದ ಮರುನಿರ್ಮಾಣ ಹಾಗೂ ಹೆಚ್ಚುವರಿಯಾಗಿ ಸರಪಳಿ : 210 ರಿಂದ 225 ಮೀ ರವರೆಗೆ ವಿಯರ್ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಕಾಮಗಾರಿ

ಇನ್ನೂ ಪೂರ್ಣಗೊಂಡಿಲ್ಲ ಈ ವಿಯರ್ ಎರಡನೇ ಬಾರಿ ಒಡೆದಿಲ್ಲ. ದಕ್ಕೆಯಾದ ಈ ಭಾಗದ ಕಾಮಗಾರಿಯನ್ನು ನಿರ್ಮಿಸಲು, ನೀರಿನ ಹರಿವನ್ನು ನಿಯಂತ್ರಿಸಿ ಮಾರ್ಗ ಬದಲಿಸಲು ನಿರ್ಮಿಸಿದ್ದ ತಾತ್ಕಾಲಿಕ ರಿಂಗ್‌ಬಂಡ್ ಮಳೆಯಿಂದ ಉಂಟಾದ ಪ್ರವಾಹದಿಂದ ದಿನಾಂಕ: 04–11–2011 ರಂದು ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ನಿರ್ಮಾಣಗೊಂಡಿದ್ದ ವಿಯರ್‌ನ ಬಲಭಾಗವು ದಿನಾಂಕ: 08–05–2007 ರಂದು ಹಾನಿಗೊಂಡಿದ್ದ ಹಿನ್ನೆಲೆಯಲ್ಲಿ ಈ ಕಳಪೆ ಕಾಮಗಾರಿಗೆ ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ರಿಂಗ್‌ಬಂಡ್ ಕೊಚ್ಚಿಹೋಗಿದ್ದರಿಂದ ನದಿಯ ದಂಡೆಯಲ್ಲಿರುವ ಸುಮಾರು 2 ಎಕರೆ ಜಮೀನು ಕೊರೆದು ಹೋಗಿರುವುದು ಮತ್ತು ಮರಗಳು ಹಾನಿಯಾಗಿರುವುದಾಗಿ 7 ಜನ ರೈತರು ಪರಿಹಾರ ಕೋರಿ ಸರ್ಕಾರಕ್ಕೆ ಅರ್ಜಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

(ಈ) ಈ ಬೆಳೆ ಮತ್ತು ಭೂಮಿಗೆ ಆಗಿರುವ ಹಾನಿಯ ಬಗ್ಗೆ ರೆವಿನ್ಯೂ/ತೋಟಗಾರಿಕೆ ಇಲಾಖೆಯಿಂದ ಜಂಟಿ ಅಳತೆ ಮಾಡಿಸಿ, ವರದಿ ಪಡೆದು. ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ತಾತ್ಕಾಲಿಕವಾಗಿ ನಿರ್ಮಿಸಿದ್ದ ರಿಂಗ್‌ಬಂಡ್ ಕೊಚ್ಚಿಹೋಗಿದ್ದು, ಇದನ್ನು ಪುನರ್ ನಿರ್ಮಿಸಿ, ವಿಯರ್ ನಿರ್ಮಾಣವನ್ನು ಮುಂದುವರೆಸಿ ಪೂರ್ಣಗೊಳಿಸಲಾಗುವುದು.

**ಏತ ನೀರಾವರಿ ಕಾಮಗಾರಿ**

**352 (687) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು) ಜಲಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:–**

(ಅ) ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕೆಸ್ತೂರು ಏತ ನೀರಾವರಿ ಕಾಮಗಾರಿ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕಾಮಗಾರಿಯ ವಿಳಂಬವಾಗಲು ಕಾರಣವೇನು; ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ